SEPTEMBER 15, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಮೊಳಕೆಯೊಡೆದ, ಹೆಸರು, ಮೆಂತ್ಯೆ ಕಾಳಿನ, ಬಾಹ್ಯಾಕಾಶ ಪೌಷ್ಟಿಕಾಂಶ ಸುಸ್ಥಿರತೆ ಸಂಶೋಧನೆಗೆ, ಧಾರವಾಡ ಕೃಷಿ ವಿಶ್ವವಿದ್ಯಾಲಯ, ಸಜ್ಜು.
- ಜಿ.ಎಸ್.ಟಿ. ಪರಿಷ್ಕರಣೆ; ಶ್ರೀ ಸಾಮಾನ್ಯರ, ದೈನಂದಿನ ಬಳಕೆಯ, ಶೇಕಡ 99 ವಸ್ತುಗಳ ಕರ, ಶೇಕಡ 5ಕ್ಕೆ ಇಳಿಕೆ.
- ಇಂದು, ರಾಷ್ಟ್ರೀಯ ಅಭಿಯಂತರ ದಿನಾಚರಣೆ.
- "ನನ್ನ ಮತ, ನನ್ನ ಹಕ್ಕು"; ಇಂದು, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ.

<><><>

ಈಗ ವಾರ್ತೆಗಳ ವಿವರ

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಜೈವಿಕ ತಂತ್ರಜ್ಞಾನ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಭಾರತೀಯ ತಂತ್ರಜ್ಞಾನ ಸಂಸ್ಥೆ, ಐ.ಐ.ಟಿ. ಧಾರವಾಡ ಜಂಟಿಯಾಗಿ, ಎಕ್ಸಿಯಮ್ ಮಿಷನ್ 4 ಅಡಿ, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಿದ್ದ, ಹೆಸರು ಕಾಳು ಹಾಗೂ ಮೆಂತ್ಯೆ ಬೀಜಗಳು, ಬಾಹ್ಯಾಕಾಶ ಪೌಷ್ಟಿಕಾಂಶ ಸುಸ್ಥಿರತೆ ಸಂಶೋಧನೆಗಾಗಿ, ಕೃಷಿ ವಿಶ್ವವಿದ್ಯಾಲಯಕ್ಕೆ ಮರಳಿವೆ. ಕಳೆದ ಜೂನ್ 25 ರಿಂದ, 18 ದಿನಗಳ ಕಾಲ, ಭಾರತೀಯ ಗಗನಯಾತ್ರಿ, ಭಾರತೀಯ ವಾಯುಸೇನೆಯ ಗ್ರುಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ, ಬಾಹ್ಯಾಕಾಶದಲ್ಲಿ ಮೊಳಕೆಯೊಡಿಸಿ, ಮೈನಸ್ 80 ಡಿಗ್ರಿ ಸೆಲ್ಸಿಯಸ್‌ನಲ್ಲಿ ಶೈತ್ಯೀಕರಿಸಿ ಮರಳಿ ತಂದಿದ್ದಾರೆ.

ಈ ಕುರಿತು ಒಂದು ವರದಿ..

*ಗಗನಯಾತ್ರಿಗಳು ಬಾಹ್ಯಾಕಾಶದಲ್ಲಿ, ಪೌಷ್ಟಿಕಾಂಶದ ಕೊರತೆ ಸೇರಿದಂತೆ, ಗಮನಾರ್ಹ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಾರೆ. ಇದಕ್ಕೆ ಪರಿಹಾರವಾಗಿ, ಅಲ್ಲಿ ತಾಜಾ, ಮೊಳಕೆಯೊಡೆದ ಹೆಸರು, ಮೆಂತ್ಯೆ ಬೀಜಗಳನ್ನು ಬಳಸುವ ಸಾಧ್ಯತೆಯನ್ನು ಅನ್ವೇಷಿಸಲು ಹಾಗೂ ಪೋಷಕಾಂಶ ಗುಣಮಟ್ಟ – ಫೈಟೋಹಾರ್ಮೋನ್ ಡೈನಾಮಿಕ್ಸ್ ಬದಲಾವಣೆ ಮತ್ತು ಬಾಹ್ಯಾಕಾಶ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಬಗ್ಗೆ ಇನ್ನಷ್ಟೇ, ಧಾರವಾಡ ಕೃಷಿ ವಿಶ್ವವಿದ್ಯಾಲಯ ಸಂಶೋಧನೆ ಆರಂಭಿಸಲಿದೆ.*

*ಭಾರತೀಯ ಪಾಕ ಪದ್ಧತಿಯಲ್ಲಿ ಸಲಾಡ್ ಸಸ್ಯಗಳಿಗಿಂತ ಮೊಳಕೆ ಕಾಳುಗಳಿಗೆ ಹೆಚ್ಚಿನ ಆದ್ಯತೆ ಮತ್ತು ಪೌಷ್ಟಿಕಾಂಶ ಆಹಾರ ಮೌಲ್ಯ ನೀಡಲಾಗಿದೆ. ರೋಗ ನಿರೋಧಕ ಶಕ್ತಿಯನ್ನು ಸಹ ಈ ಕಾಳುಗಳು ವರ್ಧಿಸುತ್ತವೆ. ಮುಂದಿನ 60 ದಿನಗಳ ಕಾಲ, ಬಾಹ್ಯಾಕಾಶದಿಂದ ಮರಳಿ ತಂದ, ಹೆಸರು ಹಾಗೂ ಮೆಂತ್ಯೆ ಮೊಳಕೆಯೊಡಿಸಿದ ಕಾಳುಗಳ ಅಧ್ಯಯನ ಕೈಗೊಳ್ಳುವುದಾಗಿ ಜೈವಿಕ ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕ ರವಿಕುಮಾರ ಹೊಸಮನಿ ತಿಳಿಸಿದ್ದಾರೆ.*

<><><>

ವಿವೇಕ ಧ್ವನಿ (51) + ರವಿಕುಮಾರ ಹೊಸಮನಿ ಧ್ವನಿ (48) ಸೆಕೆಂದುಗಳು

<><><>

'ಪೌಷ್ಟಿಕ ಆಹಾರ ಭದ್ರತೆಗೆ, ಮಣ್ಣಿನ ಆರೋಗ್ಯ ಹಾಗೂ ಸಾಂಪ್ರದಾಯಿಕ ತಳಿಗಳು' ಶೀರ್ಷಿಕೆಯಡಿ, ಧಾರವಾಡ ಕೃಷಿ ವಿಶ್ವವಿದ್ಯಾಲಯ, ಆಯೋಜಿಸಿದ ಕೃಷಿ ಮೇಳ, ಇಂದಿಗೆ ಮೂರನೇ ದಿನಕ್ಕೆ ಕಾಲಿಟ್ಟಿದೆ. ನಾಳೆ ಸಮಾರೋಪಗೊಳ್ಳಲಿದೆ.

<><><>

ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಬೀಜೋತ್ಪಾನೆಯಲ್ಲಿ ಸಾಧನೆಗೈದ, ಧಾರವಾಡದ ರೈತ ಮಹಿಳೆ, ಮಂಜುಳಾ ಬಸವರಾಜ ಕಾಮರೆಡ್ಡಿ, ಶಿವಪ್ಪ ಕಟ್ಟಿ ಹಾಗೂ ಹುಬ್ಬಳ್ಳಿಯ ಅಶೋಕ ಮತ್ತಿಹಳ್ಳಿ ಅವರಿಗೆ  ಪ್ರಶಸ್ತಿ ನೀಡಿ, ಗೌರವಿಸಿದರು.

<><><>

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಕೃಷಿ ಮೇಳದಲ್ಲಿ ಪಾಲ್ಗೊಂಡು, ಸಾಧಕ ರೈತರನ್ನು ಪುರಸ್ಕರಿಸಲಿದ್ದಾರೆ.

<><><>

ಕೃಷಿ ಮೇಳದಲ್ಲಿ, ನವೋದ್ಯಮ ಪೆವಿಲಿಯನ್, ಯುವಜನರ ಆಕರ್ಷಣೆಯ ಕೇಂದ್ರವಾಗಿದೆ. ಕೃಷಿಕ್ ನವೋದ್ಯಮ್ ಪೋಷಣ್ ಕೇಂದ್ರದಿಂದ, ಮೂರು ನೂರು ಸ್ಟಾರ್ಟ್‌ಅಪ್‌ಗಳಿಗೆ ತರಬೇತಿ ನೀಡಲಾಗಿದೆ. ಒಟ್ಟು 14 ಕೋಟಿ 50 ಲಕ್ಷ ರೂಪಾಯಿ ಅನುದಾನಕ್ಕೆ, ಶಿಫಾರಸು ಮಾಡಲಾಗಿದೆ. 100 ಕೋಟಿ ರೂಪಾಯಿಗೂ ಹೆಚ್ಚು ಆದಾಯ, ಸಾವಿರ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ.

<><><>

ಮಹಿಳೆಯರ ನೇತೃತ್ವದ 25 ಸ್ಟಾರ್ಟ್‌ಅಪ್‌ಗಳು, 10 ಲಕ್ಷ ರೈತರಿಗೆ, ಕೃಷಿ ತಂತ್ರಜ್ಞಾನ ತಲುಪಿಸಿವೆ. 40 ಹಕ್ಕುಸ್ವಾಮ್ಯ ಮತ್ತು 8 ಸ್ಟಾರ್ಟ್ ಅಪ್‌ಗಳು, ವಿದೇಶಿ ಬಂಡವಾಳ ಪಡೆದುಕೊಂಡಿವೆ.

<><><>

ಈಗ ಪ್ರಕಟಣೆ,<br>
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..<br>
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಸರಕು ಮತ್ತು ಸೇವಾ ತೆರಿಗೆ, ಕೇಂದ್ರ ಮಂಡಳಿಯ, 56ನೇ ಸಭೆ ಶಿಫಾರಸಿನಂತೆ, ಪರಿಷ್ಕೃತ ದರಗಳು, ಈ ತಿಂಗಳ 22ನೇ ತಾರೀಖು, ನವರಾತ್ರಿಯ ಮೊದಲ ದಿನದಿಂದ, ದೇಶಾದ್ಯಂತ ಜಾರಿಗೊಳ್ಳಲಿವೆ. ಜನ ಸಾಮಾನ್ಯರು ಹಾಗೂ ಮಧ್ಯಮ ವರ್ಗದ ಜನ ಹೆಚ್ಚಾಗಿ ಬಳಸುವ, ಕೆಲ ವಸ್ತುಗಳ ಮೇಲಿನ ಜಿ.ಎಸ್.ಟಿ. ತೆರಿಗೆಯನ್ನು, ಶೇಕಡ 5ಕ್ಕೆ ಇಳಿಸಲು, ಕೇಂದ್ರದ ಜಿ.ಎಸ್.ಟಿ. ಮಂಡಳಿ ಶಿಫಾರಸು ಮಾಡಿದೆ.

<><><>

ಶೇಕಡ 12ರ ಜಿ.ಎಸ್.ಟಿ. ಶ್ರೇಣಿಯಲ್ಲಿದ್ದ, ಶೇಕಡ 99 ರಷ್ಟು ಸರಕುಗಳು, ಈಗ ಶೇಕಡ 5ರ ಜಿ.ಎಸ್.ಟಿ ಶ್ರೇಣಿಗೆ ಬಂದಿವೆ ಎಂದು, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, ಚೆನ್ನೈನಲ್ಲಿ ಆಯೋಜಿತ, 'ಉದಯಿಸುತ್ತಿರುವ ಭಾರತಕ್ಕಾಗಿ, ತೆರಿಗೆ ಸುಧಾರಣೆಗಳು' ಎಂಬ, ವ್ಯಾಪಾರ ಮತ್ತು ಕೈಗಾರಿಕೆಗಳ ಸಂಘದ ಜಂಟಿ ಸಮಾವೇಶದಲ್ಲಿ, ಹೇಳಿದ್ದಾರೆ.

<><><>

ಧಾರವಾಡ ಜಿಲ್ಲೆ, ವಾಣಿಜ್ಯೋದ್ಯಮ ಸಂಘದ ಕಾರ್ಯದರ್ಶಿ, ರವೀಂದ್ರ ಆಕಳವಾಡಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ..

<><><>

ರವೀಂದ್ರ ಆಕಳವಾಡಿ ಧ್ವನಿ 55 ಸೆಕೆಂದುಗಳು

<><><>

'ವಿಶ್ವದ ಸುಸ್ಥಿರತೆಗಾಗಿ, ಅಭಿಯಾಂತ್ರಿಕ ಪರಿಹಾರೋಪಾಯಗಳು' ಎಂಬ ಧ್ಯೇಯದೊಂದಿಗೆ, ಇಂದು ರಾಷ್ಟ್ರೀಯ ಅಭಿಯಂತರ ದಿನವನ್ನು ಆಚರಿಸಲಾಗುತ್ತಿದೆ. ನಾಡು ಕಂಡ ಶ್ರೇಷ್ಠ ಅಭಿಯಂತರ, ಭಾರತ ರತ್ನ, ಮೋಕ್ಷಗುಂಡಂ ವಿಶ್ವೇಶ್ವರಾಯ ಅವರ, ಜನ್ಮ ದಿನವನ್ನು ಇಂಜಿನೀಯರ್‌ಗಳ ದಿನವನ್ನಾಗಿ, ಆಚರಿಸಲಾಗುತ್ತದೆ. ತಂತ್ರಜ್ಞಾನದ ಬೆಳವಣಿಗೆ ಹಾಗೂ ಪರಿಸರ ಸಮತೋಲನ ಸಾಧಿಸುವಲ್ಲಿ ಅಭಿಯಾಂತ್ರಿಕ ಸಂಶೋಧನೆ ಮತ್ತು ನಾವಿನ್ಯತೆ ಮಹತ್ವದಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 125ನೇ ಆವೃತ್ತಿಯ, ಮನ್ ಕಿ ಬಾತ್‌ನಲ್ಲಿ ಅಭಿಯಂತರರ ದಿನಕ್ಕೆ, ಒತ್ತು ನೀಡಿದ್ದರು.

<><><>

ಪ್ರಧಾನಮಂತ್ರಿ ಮೋದಿ ಧ್ವನಿ 24 ಸೆಕೆಂದುಗಳು

<><><>

"ನನ್ನ ಮತ, ನನ್ನ ಹಕ್ಕು" ಧ್ಯೇಯದೊಂದಿಗೆ, ಇಂದು, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಿಸಲಾಗುತ್ತಿದೆ. ಇಂದು ಬೆಳಗ್ಗೆ 11 ಗಂಟೆಗೆ, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ಪ್ರಧಾನ ಕಾರ್ಯಕ್ರಮ ಜರುಗಲಿದೆ. ಎಲ್ಲ 31 ಜಿಲ್ಲಾ ಕೇಂದ್ರಗಳಿಂದ ಆಗಮಿಸುವ, ಬೈಕ್ ಜಾಥಾವನ್ನು, ಮುಖ್ಯಮಂತ್ರಿ ಸ್ವಾಗತಿಸಲಿದ್ದಾರೆ.

ಮತದಾನವು ಬರೀ ಹಕ್ಕು ಮಾತ್ರವಲ್ಲ, ಬದಲಾಗಿ ಹೊಣೆಗಾರಿಕೆಯೂ ಆಗಿದೆ ಎಂಬ ಸಂದೇಶವನ್ನು ಪಸರಿಸಲಿದೆ. 2007 ರಲ್ಲಿ, ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ಘೋಷಿಸಿದ, ಈ ವಿಶೇ ´ ದಿನ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸುವ, ಜಾಗತಿಕ ಕರೆಯಾಗಿದೆ.

<><><>

ಹೆಸರಾಂತ ಜಾನಪದ ಸಾಹಿತಿ, ನಿವೃತ್ತ ಪ್ರಾಚಾರ್ಯ, ಎನ್.ಆರ್.ನಾಯಕ, ನಿಧನರಾಗಿದ್ದಾರೆ. ಅವರಿಗೆ 91 ವರ್ಷ ವಯಸ್ಸಾಗಿತ್ತು. ನಾರಾಯಣ ರಾಮ ನಾಯಕರು, ಹಲವು ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾಗಿದ್ದರು. ಅವರ ಇಚ್ಛೆಯಂತೆ ಕಣ್ಣುಗಳನ್ನು ದಾನ ಮಾಡಲಾಗಿದೆ. ಪಾರ್ಥಿವ ಶರೀರದ ಅಂತ್ಯಕ್ರಿಯೆ, ಉತ್ತರಕನ್ನಡ ಜಿಲ್ಲೆ, ಹೊನ್ನಾವರದಲ್ಲಿ ಇಂದು ಬೆಳಗ್ಗೆ 10.30ಕ್ಕೆ, ಜರುಗಲಿದೆ ಎಂದು, ಕುಟುಂಬ ತಿಳಿಸಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 75ನೇ ಜನ್ಮ ದಿನಾಚರಣೆ ಹಿನ್ನೆಲೆ, 17ನೇ ತಾರೀಖಿನಿಂದ, ಅಕ್ಟೋಬರ್ 2 ಗಾಂಧಿ ಜಯಂತಿ ವರೆಗೆ, ರಾಜ್ಯಾದ್ಯಂತ ಸೇವಾ ಪಾಕ್ಷಿಕ, ಸೇವಾ' ಪರ್ವ ಆಯೋಜಿತವಾಗಿದೆ. ಸ್ವಚ್ಛತೆಯೇ ಸೇವೆ ಹಾಗೂ ಸ್ವಚ್ಛತೆಯೇ ಈಶ್ವರ ಎಂಬ ಧ್ಯೇಯದೊಂದಿಗೆ, ಸಾಮುದಾಯಿಕ ಸಹಭಾಗಿತ್ವದಲ್ಲಿ, ಜನಾಂದೋಲನದ ಮೂಲಕ, ಸ್ವಚ್ಛತೆ ಮತ್ತು ನೈರ್ಮಲ್ಯ ಖಾತ್ರಿ ಪಡಿಸಲು, ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

<><><>

ಬಿಜೆಪಿ ಸಹ, ಬೂತ್ ಮಟ್ಟದಲ್ಲಿ, ತನ್ನ ಕಾರ್ಯಕರ್ತರೊಂದಿಗೆ, ಸ್ವಚ್ಛತಾ ಹೀ ಸೇವಾ ಪಾಕ್ಷಿಕದಡಿ, ಶ್ರಮದಾನ ಕಾರ್ಯ ರಾಜ್ಯಾದ್ಯಂತ ಕೈಗೊಳ್ಳಲಿದೆ.

<><><>

ಧ್ಯೇಯ ಸಂಗೀತ 10 ಸೆಕೆಂದುಗಳು

<><><>

ರಾಜ್ಯಾದ್ಯಂತ, ಲಿಂಗತ್ವ ಅಲ್ಪಸಂಖ್ಯಾತರ ಮೊದಲ ಹಂತದ ಸಮೀಕ್ಷೆ ಹಾಗೂ ಧಾರವಾಡ ಮತ್ತು ಬೆಳಗಾವಿ ಸೇರಿದಂತೆ, ರಾಜ್ಯದ 15 ಜಿಲ್ಲೆಗಳಲ್ಲಿ, ವಿಮುಕ್ತ ದೇವದಾಸಿಯರ ಮರು ಸಮೀಕ್ಷೆ, ಇಂದಿನಿಂದ ಆರಂಭವಾಗಲಿದೆ. 45 ದಿನಗಳ ಕಾಲ ನಡೆಯಲಿದೆ. ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಹಾವೇರಿ, ಗದಗ, ಕಲಬುರ್ಗಿ, ಯಾದಗಿರಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ, ಎರಡೂ ಸಮೀಕ್ಷೆಗಳನ್ನು, ವಿಶೇಷ ಆನ್ಲೈನ್ ಅಪ್ಲಿಕೇಷನ್ ಆಧರಿಸಿ, ಕೈಗೊಳ್ಳಲಾಗುತ್ತಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- ಮೊಳಕೆಯೊಡೆದ, ಹೆಸರು, ಮೆಂತ್ಯೆ ಕಾಳಿನ, ಬಾಹ್ಯಾಕಾಶ ಪೌಷ್ಟಿಕಾಂಶ ಸುಸ್ಥಿರತೆ ಸಂಶೋಧನೆಗೆ, ಧಾರವಾಡ ಕೃಷಿ ವಿಶ್ವವಿದ್ಯಾಲಯ, ಸಜ್ಜು.
- ಜಿ.ಎಸ್.ಟಿ. ಪರಿಷ್ಕರಣೆ: ಶ್ರೀ ಸಾಮಾನ್ಯರ, ದೈನಂದಿನ ಬಳಕೆಯ, ಶೇಕಡ 99 ವಸ್ತುಗಳ ಕರ, ಶೇಕಡ 5ಕ್ಕೆ ಇಳಿಕೆ.

- ಇಂದು, ರಾಷ್ಟ್ರೀಯ ಅಭಿಯಂತರ ದಿನಾಚರಣೆ.
- "ನನ್ನ ಮತ, ನನ್ನ ಹಕ್ಕು": ಇಂದು, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>